ಅಂಗನವಾಡಿ ಕಾರ್ಯಕರ್ತೆಯರ ಕೆಲಸ ನಿರ್ವಹಣೆ

180 (507) ಶ್ರೀ ಖಾದರ್ ಯು.ಟಿ. (ಮಂಗಳೂರು) :– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರಿಗೆ ಗೊತ್ತುಪಡಿಸಿರುವ ಕೆಲಸ ಕಾರ್ಯಗಳೇನು;

ಆ) ಅಂಗನವಾಡಿ ಕಾರ್ಯಕರ್ತೆಯವರು ಕೆಲಸದ ಒತ್ತಡದಿಂದ ಅಂಗನವಾಡಿ ಕೇಂದ್ರಗಳ ನಿರ್ವಹಣೆಯಲ್ಲಿ ವಿಫಲರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ;

ಈ) ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಳವನ್ನು ಹೆಚ್ಚಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ? (ವಿವರ ಒದಗಿಸುವುದು)

ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):–

ಅ) ವಿವರವನ್ನು ಅನುಬಂಧ–1ರಲ್ಲಿ ಒದಗಿಸಿದೆ.

ಆ) ಬಂದಿದೆ.

ಇ) ಇತರೆ ಇಲಾಖೆ ಕೆಲಸಗಳಿಗೆ ನಿಯೋಜಿಸಬಾರದೆಂದು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ, ಈ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆರವರಿಗೂ ಸಹ ಪತ್ರ ಬರೆಯಲಾಗಿದೆ.

ಈ) ಈಗಾಗಲೇ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗೌರವಧನವನ್ನು ಹೆಚ್ಚಿಸಿದ್ದು ವಿವರವನ್ನು ಅನುಬಂಧ–2 ರಲ್ಲಿ ಒದಗಿಸಿದೆ.

ಅನುಬಂಧ–1

ಅಂಗನವಾಡಿ ಕಾರ್ಯಕರ್ತೆ

1. ಜನ ಸಮುದಾಯದ ಸಮೀಕ್ಷೆಯನ್ನು ಕೈಗೊಂಡು, ಸಹಾಯ ಅಗತ್ಯವಾಗಿರುವಂಥವರ ವಿವರ ಸಂಗ್ರಹಿಸುವುದು. ಆರು ವರ್ಷದ ಕೆಳಗಿನ ಮಕ್ಕಳ ಸಂಖ್ಯೆ, ಗರ್ಭಿಣಿ ಮತ್ತು

ಹಾಲೂಣಿಸುತ್ತಿರುವ ತಾಯಂದಿರ, ಇವುಗಳನ್ನು ಸಂಗ್ರಹಿಸಬೇಕು. ಕುಟುಂಬಗಳ ಸಂಖ್ಯೆ, ಕುಟುಂಬದಲ್ಲಿ ಸದಸ್ಯರ ಸಂಖ್ಯೆ, ಕುಟುಂಬದ ಆದಾಯ ಇವುಗಳನ್ನು ಸಂಗ್ರಹಿಸಬೇಕು. ಮುಖ್ಯ ಅಂಕಿ-ಅಂಶಗಳಾದ ಜನನ-ಮರಣಗಳ ದಾಖಲೆಯನ್ನೂ ಇಡಬೇಕು.

2. 0-6 ವರ್ಷಗಳ ನಡುವಿನ ಮಕ್ಕಳ ಮತ್ತು ಗರ್ಭಿಣಿ ಮತ್ತು ಹಾಲೂಣಿಸುತ್ತಿರುವ ತಾಯಂದಿರಿಗೆ ಅಧಿಕ ಪೋಷಕಾಂಶ ಒದಗಣೆ ಮಾಡುವುದು.

3. ಮಹಿಳೆಯರು, ಮಕ್ಕಳ ತಾಯಂದಿರಿಗೆ ಮತ್ತು ಸಮುದಾಯದಕ್ಕೆ ಆರೋಗ್ಯ ಮತ್ತು ಪೋಷಣೆಗೆ ಸಂಬಂಧಿಸಿದಂತೆ ಶಿಕ್ಷಣ ಕೊಡಬೇಕು.

4. 3 ಮತ್ತು 6 ವರ್ಷಗಳ ಮಕ್ಕಳ ಶಾಲಾ ಪೂರ್ವ ಶಿಕ್ಷಣವನ್ನು ಕೈಗೊಳ್ಳಬೇಕು.

5. ಪ್ರಾಥಮಿಕ ಆರೋಗ್ಯ ಹಾಗೂ ಪ್ರಥಮ ಚಿಕಿತ್ಸಾ ಸೌಲಭ್ಯಗಳನ್ನು 6 ವರ್ಷದೊಳಗಿನ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಒದಗಿಸುವುದು.

6. ಮಕ್ಕಳಲ್ಲಿ ನ್ಯೂನ್ಯತೆಯನ್ನು ಮೊದಲೆ ಗುರುತಿಸುವುದು ಹಾಗೂ ಅದನ್ನು ತಡೆಗಟ್ಟುವಲ್ಲಿ ಕ್ರಮವಹಿಸುವುದು.

7. ಮನೆ ಭೇಟಿ ಮೂಲಕ ಅಂಗನವಾಡಿ ಕೇಂದ್ರಕ್ಕೆ ಬರುವ ತಂದೆ-ತಾಯಂದಿರನ್ನು ಕಂಡು ಅವರೊಡನೆ ಸಂಪರ್ಕ ಬೆಳೆಸುವುದು ಹಾಗೂ ಐಸಿಡಿಎಸ್ ಕಾರ್ಯಕ್ರಮದಲ್ಲಿ ಅವರ ಪಾಲ್ಗೊಳ್ಳುವಿಕೆ.

8. ರೋಗ ನಿರೋಧಕ ಚುಚ್ಚು ಮದ್ದು ಮತ್ತು ಆರೋಗ್ಯ ತಪಾಸಣೆ ಮಾಡುವಲ್ಲಿ ಆರೋಗ್ಯ ಸಿಬ್ಬಂದಿಗೆ ಸಹಾಯ ಮಾಡುವುದು.

9. ಪ್ರಬಲವಾಗಿ ನ್ಯೂನಪೋಷಣೆಗೊಳಗಾದ, ಪೋಷಕಾಂಶ ಅಗತ್ಯವುಳ್ಳ, ಅನಾರೋಗ್ಯವುಂಟಾದ, ಅಪಾಯದಲ್ಲಿರುವ ಮಕ್ಕಳನ್ನು, ಅಂಟುರೋಗ ಮತ್ತು ನ್ಯೂನ್ಯತೆ ಇರುವ ಮಕ್ಕಳನ್ನು ತಜ್ಞ ವೈದ್ಯರಲ್ಲಿಗೆ ಕಳುಹಿಸಬೇಕು.

10. ತೂಕದ ಕಾರ್ಡ್‌ಗಳು, ರಿಜಿಸ್ಟರುಗಳು, ಮಗುವಿನ ಆರೋಗ್ಯ, ಪೋಶಕಾಂಶಕ್ಕೆ ಸಂಬಂಧಿಸಿದ ದಾಖಲೆಗಳು ಅಂಗನವಾಡಿ ಹಾಜರಿ ದಾಖಲೆಗಳು-ಇವುಗಳನ್ನು ಬರೆಯಬೇಕು.

11. ಗ್ರಾಮ/ಶಹರದ ಇತರ ಸಂಘ-ಸಂಸ್ಥೆಗಳಾದ ಪಂಚಾಯತಿ, ಮಹಿಳಾ ಮಂಡಳಿ, ಶಾಲೆ, ಸ್ಥಳೀಯ ಸಂಸ್ಥೆ ಇತ್ಯಾದಿಗಳ ಸಹಕಾರ ಮತ್ತು ಸಹಭಾಗಿತ್ವವನ್ನು ಕೋರುವುದು.

ಅನುಬಂಧ-2

ಕ್ರ.ಸಂ.	ವಿವರ	ಕೇಂದ್ರ ಸರ್ಕಾರ 1.4.2011ರಿಂದ ಅನ್ವಯಿಸುವಂತೆ ಪರಿಷ್ಕರಿಸಿದ ಗೌರವಧನ	ರಾಜ್ಯ ಸರ್ಕಾರ 1.4.2011ರಿಂದ ಅನ್ವಯಿಸುವಂತೆ ಪರಿಷ್ಕರಿಸಿದ ಹೆಚ್ಚುವರಿ ಗೌರವಧನ
ಅ)	ಅಂಗನವಾಡಿ ಕಾರ್ಯಕರ್ತೆ		
1.	ಎಸ್.ಎಸ್.ಎಲ್.ಸಿ. ಫೇಲಾದವರು	ರೂ. 2938	ರೂ. 1500/-
2.	ಎಸ್.ಎಸ್.ಎಲ್.ಸಿ. ಫೇಲಾಗಿ 5 ವರ್ಷ ಗೌರವಸೇವೆ ಸಲ್ಲಿಸಿರುವವರು	ರೂ. 2969	ರೂ. 1500/-
3.	ಎಸ್.ಎಸ್.ಎಲ್.ಸಿ. ಫೇಲಾಗಿ 10 ವರ್ಷ ಗೌರವಸೇವೆ ಸಲ್ಲಿಸಿರುವವರು	ರೂ. 3000	ರೂ. 1500/-
4.	ಎಸ್.ಎಸ್.ಎಲ್.ಸಿ. ಪಾಸಾಗಿರುವವರು	ರೂ. 3000	ರೂ. 1500/-
5.	ಎಸ್.ಎಸ್.ಎಲ್.ಸಿ. ಪಾಸಾಗಿ 5 ವರ್ಷ ಗೌರವಸೇವೆ ಸಲ್ಲಿಸಿರುವವರು	ರೂ. 3031	ರೂ. 1500/-
6.	ಎಸ್.ಎಸ್.ಎಲ್.ಸಿ ಪಾಸಾಗಿ 10 ವರ್ಷ ಗೌರವಸೇವೆ ಸಲ್ಲಿಸಿರುವವರು	ರೂ. 3063	ರೂ. 1500/-
ಬಿ.	ಅಂಗನವಾಡಿ ಸಹಾಯಕಿಯರು	ರೂ. 1500	ರೂ. 750/-
ಸಿ	ಮಿನಿ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು	ರೂ. 1500	ರೂ. 750/-

ರಾಜ್ಯದಲ್ಲಿನ ಅವಿಭಾಜಿತ ಕುಟುಂಬ 2 ಕ್ಕಿಂತ ಹೆಚ್ಚಿನ ಗೃಹ ಬಳಕೆ ಗ್ಯಾಸ್ ಹೊಂದಿರುವುದು

181 (508) ಶ್ರೀ ಖಾದರ್ ಯು.ಟಿ. (ಮಂಗಳೂರು) :- ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದ ಅವಿಭಾಜಿತ ಕುಟುಂಬಗಳಲ್ಲಿ ಎರಡಕ್ಕಿಂತ ಹೆಚ್ಚಿನ ಗ್ಯಾಸ್ ಸಿಲಿಂಡರ್ ಹೊಂದಿರುವವರು ಸರ್ಕಾರದ ದ್ವಂದ್ವ ನಿಲುವಿನಿಂದ ದುಗುಡದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಸ್ಪಷ್ಟ ನಿಯಮವನ್ನು ಜಾರಿ ತರುವ ಮೂಲಕ ಪ್ರಾಮಾಣಿಕ